VIJAYAKUMAR KANNUR
Digitally signed by VIJAYAKUMAR KANNUR
Date: 2025.11.28 17:14:33 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 28.11.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಯರ ಪರ ಶ್ರೀ ಎಂ ಎಂ ಟಿ ವಕೀಲರಿಂದ :**

ನಾನು ಕಳೆದ 27 ವರ್ಷಗಳಿಂದಲೂ ಮುಧೋಳ ಪಟ್ಟಣದಲ್ಲಿ ವಾಸಿಸುತ್ತಿರುವೆನು ಎಂದರೆ ಸರಿ. ನನ್ನ ಜಮೀನಿನ ಸರ್ವೇ ನಂಬರ್ 83/2 ಎ/1. ನನ್ನ ಜಮೀನಿನ ದಕ್ಷಿಣ ದಿಕ್ಕಿಗೆ ಘಟಪ್ರಭಾ ನದಿ ಹರಿದು ಹೋಗಿದೆ ಎಂದರೆ ಸರಿ. 2020-21 ನೇ ಸಾಲಿನಲ್ಲಿ ಘಟಪ್ರಭಾ ನದಿಗೆ ಪ್ರವಾಹ ಬಂದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಈ ಪ್ರವಾಹದ ಪರಿಣಾಮದಿಂದಾಗಿ ನದಿಯ ದಂಡೆಯ ಅಕ್ಕಪಕ್ಕದಲ್ಲಿ ಇರುವ ಜಮೀನಿನ ಬಳೆಯ ಹಾನಿಯಾಗಿರುವುದರಿಂದ ಆ ಕಾರಣಕ್ಕೆ ಸರಕಾರದವರು ಬೆಳೆ ಪರಿಹಾರ ಹಣ ನೀಡಿರುವರು ಎಂದರೆ ಸರಿ. ನಾನು 2021 ನೇ ಸಾಲಿನಲ್ಲಿ ಈ ಬೆಳೆಯ ಪರಿಹಾರ ಹಣವನ್ನು ಸರಕಾರದಿಂದ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ.

2. ನಮ್ಮ ಜಮೀನಿನಲಿಲ ಬೆಳೆದಿರುವ ಕಬ್ಬನ್ನು ಸಮಿರವಾಡಿ ಸಕ್ಕರೆ ಕಾರ್ಖಾನೆ ಹಾಗೂ ICPL ಸಕ್ಕರೆ ಕಾರ್ಖಾನೆಗೆ ಕಳುಹಿಸಿಕೊಡುತ್ತೇವೆ. 2021 ರಲ್ಲಿ ನಮ್ಮ ಜಮೀನಿನಲ್ಲಿ ಯಾವುದೇ ಬೆಳೆ ಬೆಳೆದಿರುವುದಿಲ್ಲ. ವಾದಿಯರು ನಮ್ಮ ಜಮೀನಿಗೆ ಬಂದು ಬೆಳೆಯನ್ನು ನಷ್ಟ ಮಾಡಿರುವುದಾಗಿ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರಿಗೆ ಮತ್ತು ಅವರ ಸಹಚರರಿಗೆ ತೊಂದರೆ ಮಾಡುವ ಸಲುವಾಗಿ ನಾನು ಮುಧೋಳ ಪೊಲೀಸ್ ಠಾಣೆಯಲ್ಲಿ ಠಾಣಾ ಗುನ್ನಾ ನಂ. 189/2020-21 ರ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಪ್ರಕರಣಕ್ಕೆ ಮಾನ್ಯ ಗೌರವಾನ್ವಿತ ಉಚ್ಚ ನ್ಯಾಯಾಲಯದವರು ತಡೆಯಾಜ್ಞೆ ನೀಡಿರುವರು ಎಂದರೆ ಸರಿ. ನನ್ನ ಲಿಖಿತ ಪತ್ರದ ಎದುರು ಕ್ಲೇಮ್ ನಲ್ಲಿ ಹೇಳಿರುವಂತೆ ಹಾಗೂ ಕಚ್ಚಾ ನಕಾಶೆಯಲ್ಲಿ ಕಾಣಿಸಿರುವ ಎನ್ ಹೆಚ್ ಒ ಡಿ ಎಂಬ ಅಕ್ಷರದ ಜಾಗದಲ್ಲಿನ 20 ಟನ್ ಕಬ್ಬಿನ ಬೆಳೆಯನ್ನು ನಾಶಪಡಿಸಿ ರೂ. 60 ಸಾವಿರ ನಷ್ಟ

ಮಾಡಿರುವುದಾಗಿ ಎಂದು ನಾನು ಸುಳ್ಳು ಹೇಳಿ ಬರೆಸಿದ್ದೇನೆ ಎಂದರೆ ಸರಿಯಲ್ಲ. 2021-22 ನೇ ಸಾಲಿನಲ್ಲಿ ನಮ್ಮ ಜಮೀನಿನಲ್ಲಿ ಬೆಳೆದ ಕಬ್ಬನ್ನು ಸಕ್ಕರೆ ಕಾರ್ಖಾನೆಗೆ ಸಾಗಾಟ ಮಾಡಿದ ಬಗ್ಗೆ ಯಾವುದೇ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ.

3. ಈ ಬೆಳೆ ನಷ್ಟವಾದ ಬಗ್ಗೆ ನಾನು ಕೃಷಿ ಇಲಾಖೆಯಿಂದ ಮೌಲ್ಯ ಮಾಪನ ಮಾಡಿ ಹೇಳಿರುವೆನು. ಮತ್ತು ಅದಕ್ಕೆ ಸಂಬಂಧಪಟ್ಟಂತಹ ದಾಖಲಾತಿಯನ್ನು ಸಹ ಹಾಜರು ಪಡಿಸಿರುವೆನು. ಯಾವ ದಿನಾಂಕದಂದು ಕೃಷಿ ಇಲಾಖೆಯವರು ನನಗೆ ದಾಖಲೆ ನೀಡಿರುವರು ಎಂದು ನನಗೆ ನೆನಪಿರುವುದಿಲ್ಲ. ಲಿಖಿತ ಪತ್ರದಲ್ಲಿ ಹೇಳಿರುವಂತೆ ವಾದಿಯರು ಮತ್ತು ಅವರ ಸಹಚರರು ಕೂಡಿಕೊಂಡು ಬಂದು ಈ ಕಚ್ಚಾ ನಕ್ಷೆಯಲ್ಲಿ ಬೆಳೆದಿರುವ 20 ಟನ್ ಕಬ್ಬಿನ ಬೆಳೆಯನ್ನು ನಾಶಪಡಿಸಿ ನನಗೆ ರೂ. 60 ಸಾವಿರ ಹಣ ನಷ್ಟ ಮಾಡಿರುವುದಾಗಿ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಬೆಳೆ ನಷ್ಟ ಮಾಡಿದ ಬಗ್ಗೆ ಕೃಷಿ ಇಲಾಖೆಯವರು ಮೌಲ್ಯ ಮಾಪನ ಪತ್ರ ನೀಡಿರುವುದಾಗಿ ಎಂದು ನನಾು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿ 3 ರಿಂದ 5 ಮತ್ತು ಅವರ ವಕೀಲರನ್ನು ಕೂಗಿಸಲಾಯಿತು, ನ್ಯಾಯಾಲಯದಲ್ಲಿ ಹಾಜರು ಇರದ ಕಾರಣ ಅವರ ಪರವಾಗಿ ಯಾವುದೇ ಪಾಟೀ ಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ:** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ

VIJAYAKUMAR KANNUR
Digitally signed by VIJAYAKUMAR KANNUR
Date: 2025.11.28 17:14:38 +0530